ಕೆಲಸದ ಕಾಮಗಾರಿಯನ್ನು ಹಾಸನ ಪುರಸಭೆಯವರು ವಿನಾಕಾರಣ ಮುಂದೂಡುತ್ತಾ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸಂಬಂಧಿಸಿದ ಅಧಿಕಾರಿ ವರ್ಗದವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ(ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಹಾಸನ ಸಿಟಿಯ ಬಸ್ ಸ್ಟ್ಯಾಂಡಿಗೆ ನುಗ್ಗುತ್ತಿದ್ದ ಮಳೆಯ ನೀರನ್ನು ತಡೆಯುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಿದ್ದಾರೆ. ಸದರಿ ಬಸ್ ಸ್ಟ್ಯಾಂಡಿನಲ್ಲಿ ನುಗ್ಗುತ್ತಿದ್ದ ನೀರನ್ನು ತಡೆಯುವ ಕ್ರಮವಾಗಿ ಹಾಸನ ನಗರಸಭೆಯು ಆರ್.ಸಿ.ಸಿ. ಚರಂಡಿ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿದ್ದು, ಆ ಹಂತದಲ್ಲಿ ನಗರಸಭೆಯು ಕೆಲವೊಂದು ನಿಯಮಗಳನ್ನು ಉಲ್ಲಂಘನೆ ಮಾಡಿರುವುದಾಗಿ ಆರೋಪ ಬಂದಿದ್ದು, ಮತ್ತು ಇತರೆ ಆರೋಪಗಳ ಬಗ್ಗೆ 1964ರ ಕರ್ನಾಟಕ ಪುರಸಭೆಗಳ ಕಾಯ್ದೆಯ ಕಲಂ 316ರ ಪ್ರಕಾರ ಹಾಸನ ನಗರಸಭೆಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಕಾರಣ ಕೇಳಿ ಅಂದರೆ ಹಾಸನ ನಗರಸಭೆಯನ್ನು ಏಕೆ ರದ್ದುಪಡಿಸಬಾರದೆಂಬುದರ ಬಗ್ಗೆ ನೋಟೀಸನ್ನು ದಿನಾಂಕ : 12.2.1993 ಮತ್ತು 15.2.1993ರಂದು ಪೌರಾಯುಕ್ತರ ಮುಖಾಂತರ ನೀಡಲಾಗಿದೆ. ಸದರಿ ನೋಟೀಸಿಗೆ ಉತ್ತರ ಬಂದ ನಂತರ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಹಾಸನ ಸಿಟಿಯ ಬಸ್‌ಸ್ಟ್ಯಾಂಡಿಗೆ ಈಗಲೂ ನೀರು ನುಗ್ಗುತ್ತಿರುವುದು ಮುಂದುವರಿದಲ್ಲಿ ಇದಕ್ಕೆ ಬೇಕಾದ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಹಾಸನ ನಗರಸಭೆಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶ್ರೀ ಕೆ.ಹೆಚ್. ಹನುಮೇಗೌಡ:– ಸ್ವಾಮಿ ಜನರು ಚರಂಡಿಯೊಳಗೆ ಬೀಳುತ್ತಿದ್ದಾರೆ. ಹುಡುಗರು, ಮಕ್ಕಳು ಬೀಳುತ್ತಿದ್ದಾರೆಂದು ನಾನು ಹೇಳಿದರೆ ನೀವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ ನಾನು 334 ಅಡಿಯಲ್ಲಿ ಪ್ರಶ್ನೆ ಕೇಳಿದ್ದು ಅವರು ಹೇಳಿದ್ದನ್ನು ಕೇಳಿ ಸುಮ್ಮನೆ ಕುಳಿತುಕೊಳ್ಳಲು ಆಲ್ಲ.

(2) ಕೌಂಡಿನ್ಯ ನದಿಗೆ ಅಡ್ಡಲಾಗಿ ಕಟ್ಟುವ ಸೇತುವೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಲು ತಾಲ್ಲೂಕಿನಲ್ಲಿ ಕೌಂಡಿನ್ಯ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಲು ಸುಮಾರು ಮೂರು ವರ್ಷಗಳಿಂದ ಒತ್ತಾಯಿಸುತ್ತಿದ್ದೇನೆ. ಇದಕ್ಕೆ ಸುಮಾರು 6 ಲಕ್ಷ ರೂ.ಗಳನ್ನು ಕೋಲಾರ ಜಿಲ್ಲಾ ಪರಿಷತ್ತಿನವರು ಅಂದಾಜು ಮಾಡಿ 92–93 ನೇ ಬಜೆಟ್‌ನಲ್ಲಿ ನಮೂದಿಸಲಾಗಿತ್ತು. ಇದನ್ನು 93ನೇ ಮಾರ್ಚ್‌ಯೊಳಗೆ ಪ್ರಾರಂಭ ಮಾಡಬೇಕಾಗಿತ್ತು. ಆದರೆ ಈಗ ಇದನ್ನು ಪ್ರಾರಂಭ ಮಾಡುವ ಯಾವ ಸೂಚನೆಯೂ ಕಾಣುತ್ತಿಲ್ಲ. ಈಗ ಪ್ರಾರಂಭ ಮಾಡದಿದ್ದ ಪಕ್ಷದಲ್ಲಿ ಪುನಃ ಮಳೆಗಾಲ ಪ್ರಾರಂಭವಾಗಿ ಮತ್ತೊಂದು ವರ್ಷ ನಿಧಾನವಾಗುವ ಪರಿಸ್ಥಿತಿ ಇದೆ. ಇದಕ್ಕೆ ಕಾರಣಗಳೇನು ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ನಿಧಾನ ಪ್ರವೃತ್ತಿಯಿಂದ ಜನತೆ ಕಂಗಾಲಾಗಿದ್ದಾರೆ ದಿನವೂ ಸಾವಿರಾರು ಜನರಿಗೆ ತೊಂದರೆಯಾಗುತ್ತಿದೆ. ಮಾರ್ಚ್, 93ರೊಳಗೆ ಪ್ರಾರಂಭ ಮಾಡಲು ಕೂಡಲೇ ಕಾರ್ಯಕ್ರಮ ಕೈಗೊಳ್ಳುವುದು ಮತ್ತು ಇದು ನಿಧಾನವಾಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಾಸ್ತಾಪಿಸಿದ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡುತ್ತೇನೆ.